7. ಗಮನ ಸೆಳೆಯುವ ಸೂಚನೆ

ವಿಷಯ : ಅರ್ಕಾವತಿ ಜಲಾಶಯದಲ್ಲಿ ಮುಳುಗಡೆಯಾದ ಸಂತ್ರಸ್ತರಿಗೆ ಪುನರ್‌ವಸತಿ ಕಲ್ಪಿಸುವ ಬಗ್ಗೆ.

ಉಪಾಧ್ಯಕ್ಷರು : ಡಿ.ಕೆ. ಶಿವಕುಮಾರ್‌ರವರೆ, ಜಲಸಂಪನ್ಮೂಲ ಸಚಿವರು ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) :- ಏನು ಸ್ವಾಮಿ? ನಿನ್ನೆಯೂ ಇಲ್ಲ, ಇವತ್ತೂ ಇಲ್ಲ.

ಉಪಾಧ್ಯಕ್ಷರು :- ನಿನ್ನೆ ಗಮನ ಸೆಳೆಯುವ ಸೂಚನೆಯಲ್ಲಿ ನಿಮ್ಮ ಪ್ರಶ್ನೆ ಇತ್ತು. ತಾವು ಇರಲಿಲ್ಲ. ಮಂತ್ರಿಗಳು ಇದ್ದರು. ಆದ್ದರಿಂದ ಹಾಗೇ continue ಆಗಿದೆ.

ಶ್ರೀ ಸಿ.ಎಸ್. ನಾಡಗೌಡ :- ಮೂರು ದಿವಸಗಳಿಂದ ಲಿಖಿತ ಮೂಲಕ ಉತ್ತರ ಬಂದಿಲ್ಲ. ಅದರ ಬಗ್ಗೆ ಯಾರಾದರೂ ಹೇಳಲಿ. ಪಾರ್ಲಿಮೆಂಟರಿ ಮಂತ್ರಿಗಳು ಇಲ್ಲ. ಯಾರೂ ಇಲ್ಲ.

ಉಪಾಧ್ಯಕ್ಷರು :- ಅದರ ಪಟ್ಟಿ ಬಂದಿಲ್ಲವೇ?

ಶ್ರೀ ಸಿ.ಎಸ್. ನಾಡಗೌಡ :- ಉತ್ತರಗಳೇ ಇರುವುದಿಲ್ಲ. ಎರಡಕ್ಕೆ ಉತ್ತರ ಕೊಡುತ್ತಾರೆ. ಮತ್ತೆ ಎರಡಕ್ಕೆ ಇರುವುದಿಲ್ಲ.

ಉಪಾಧ್ಯಕ್ಷರು :- ಉತ್ತರ ಕೊಡಿಸುತ್ತೇನೆ. ಡಿ.ಕೆ. ಶಿವಕುಮಾರ್ ಮಾತನಾಡಿ.

ಶ್ರೀ ಡಿ.ಕೆ. ಶಿವಕುಮಾರ್ :- ಡಾ॥ ಆಚಾರ್ಯರವರು ಸೆಮಿನಾರ್‌ಗೆ ಹೋಗಿದ್ದಾರೆಂದು ಈ ಪಾಂಪ್ಲೆಟ್‌ನ್ನು ತೋರಿಸುತ್ತಿದ್ದಾರೆ. ನಮಗೆ ತಾವು ಸರ್ಕಾರದ ಪರವಾಗಿ ಜವಾಬ್ದಾರಿ ತೆಗೆದುಕೊಂಡು ಇಲ್ಲಿ ಉತ್ತರ ಕೊಡಬೇಕು. ಕಂದಾಯ ಕಾರ್ಯದರ್ಶಿಯವರೇನಿದ್ದಾರೆ, ಅವರನ್ನು ಕರೆದು ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕು. ಕಂದಾಯ ಕಾರ್ಯದರ್ಶಿಯವರೇನಿದ್ದಾರೆ ಏನಾದರೂ ಮಾಡಿ ಸಾತನೂರು ಕ್ಷೇತ್ರಕ್ಕೆ ತೊಂದರೆ ಕೊಡಬೇಕು ಎಂದೇ ಅವರು ಕಾರ್ಯಕ್ರಮವನ್ನು ಹಾಕಿದಂತಿದೆ. ಏಕೆಂದರೆ, ಅವರ ಹತ್ತಿರ ಫೈಲ್ ಹೋಗಿ ಎರಡು ವರ್ಷವಾಯಿತು.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಅವರು.

ಉಪಾಧ್ಯಕ್ಷರು :- ಅವರು ಮಾತನಾಡುತ್ತಿದ್ದಾರೆ. ಇದು ಗಮನ ಸೆಳೆಯುವ ಸೂಚನೆ. ಅವರು ಏನೋ ಕೇಳುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ :- ಬಡವರಿಗೆ ಪುನರ್ವಸತಿ ಕಲ್ಪಿಸುವ ವಿಚಾರದಲ್ಲಿ, ಹಣಕೊಡುವ ವಿಚಾರದಲ್ಲಿ ಅವರ ಹತ್ತಿರ ಫೈಲ್ ಇದೆ. ನಮ್ಮನ್ನು

ಕರೆದು ಅದನ್ನು ಪರಿಶೀಲನೆ ಮಾಡಿ ಆ ರೈತರಿಗೆ ಹಣವನ್ನು ಕೊಟ್ಟರೆ ಸಾಕಾಗಿದೆ. ಏಕೆಂದರೆ ಡ್ಯಾಂ ಕಟ್ಟಿ ಇದುವರೆಗೆ ನೀರನ್ನು ನಿಲ್ಲಿಸಲು ಆಗಿಲ್ಲ. Exgratia amount ನ್ನು ಏನು Finance Department, Irrigation Department clear ಮಾಡಿದೆ, ಆ ಫೈಲನ್ನು Revenue Secretary ಇಟ್ಟುಕೊಂಡು ಕುಳಿತ್ತಿದ್ದಾರೆ. ಅದರ ಬಗ್ಗೆ ಕರೆದು ಒಂದು ಸಭೆ ಮಾಡುವುದಾಗಿ ಹೋದ ಸಲ ಹೇಳಿದ್ದರು. ಆ ಸಭೆಯನ್ನು ಮಾಡಿಲ್ಲ. ಇದರ ಬಗ್ಗೆ ವಿ.ಎಸ್. ಆಚಾರ್ಯರವರು ಜವಾಬ್ದಾರಿ ತೆಗೆದುಕೊಂಡು ಬಗೆಹರಿಸಿಕೊಡುತ್ತೇವೆ ಎಂದರೆ ಸಾಕು.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಅವರು ಇದ್ದಾಗ...

ಶ್ರೀ ಡಿ.ಕೆ. ಶಿವಕುಮಾರ್ :– ನೀನು ಮಂತ್ರಿಯಲ್ಲ. ನೀನು ಮಂತ್ರಿಯಾದ ಮೇಲೆ ಮಾತನಾಡುವಿಯಂತೆ. ಇದು ಗಮನ ಸೆಳೆಯುವ ಸೂಚನೆ ಅಧ್ಯಕ್ಷರೆ; ಅವರು ಮಾತನಾಡಲು ಅವಕಾಶ ಇಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :– ಅವರು ಅನಂತರ ಉತ್ತರ ಕೊಡಲಿ, ನನ್ನದು ಒಂದೇ ಒಂದು ಮಾತು. ಒಂದೇ ಒಂದು ನಿಮಿಷ.

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ. ಅವರು ಮಾತನಾಡಿದ ಮೇಲೆ ಮಾತನಾಡಿ. ಮಂತ್ರಿಗಳು ನಿಂತಿದ್ದಾರೆ. ನೀವು ಅರ್ಥ ಮಾಡಿಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಇದು ನಮ್ಮ ಜಿಲ್ಲೆಗೆ ಸಂಬಂಧಪಟ್ಟಿದ್ದು.

(ಗೊಂದಲ)

ಉಪಾಧ್ಯಕ್ಷರು : ಹಾಗಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಡಿ.ಕೆ. ಶಿವಕುಮಾರ್‌ರವರು ಅಲ್ಲಿ ಬಹಳ ವರ್ಷಗಳ ಕಾಲ ಉಸ್ತುವಾರಿ ಸಚಿವರಾಗಿದ್ದರು. ಮುಖ್ಯಮಂತ್ರಿಗಳ ಆಪ್ತರಾಗಿದ್ದರು. ಆವತ್ತೂ Finance Secretary ಎಲ್ಲರೂ ಇದ್ದರು. ಅವತ್ತು ಅವರು ಇದನ್ನು ಕ್ಲಿಯರ್ ಮಾಡಬಹುದಿತ್ತು. ಇವತ್ತಿನವರೆಗೆ ಕಾಯುವ ಅವಶ್ಯಕತೆ ಇರಲಿಲ್ಲ. ಈ ಸರ್ಕಾರಕ್ಕೋಸ್ಕರ ಏಕೆ ಕಾದುಕೊಂಡು ಕುಳಿತರು? ಈಗ ಏಕೆ ಸುಮ್ಮನೆ ನಮ್ಮ ಮೇಲೆ ಆರೋಪ ಹೊರಿಸುತ್ತಾರೆ? ಅವರೇ ಆಗ ಮಾಡಬಹುದಿತ್ತಲ್ಲಾ? ಆಗ ಅವರಿಗೆ ಮಾಡಲು ಇಚ್ಛಾಶಕ್ತಿ ಇರಲಿಲ್ಲ. ಈಗ ಸುಮ್ಮನೆ ನಮ್ಮ ಮೇಲೆ ಆರೋಪ ಮಾಡುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್ :– ನೀವು ಮಂತ್ರಿಯಾದ ಮೇಲೆ ಮಾತನಾಡಿ. ಈಗ ನೀವು ಮಂತ್ರಿಯಲ್ಲ. ಅಕ್ಟೋಬರ್ 3 ಆದಮೇಲೆ.

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ.ಕೆ. ಶಿವಕುಮಾರ್‌ರವರ ಗಮನ ಸೆಳೆಯುವ

ಪ್ರಶ್ನೆಯ ಬಗ್ಗೆ ಮತ್ತು ಅವರು ಈಗ ಹೇಳಿರುವ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಅತೀ ಶೀಘ್ರವಾಗಿ ಅದಕ್ಕೆ ಬೇಕಾದ ಉತ್ತರವನ್ನು ನಾನು ಕೊಡಿಸುತ್ತೇನೆ. ಇದನ್ನು held over ಮಾಡುತ್ತೇನೆ.

ಆ) ವಿಷಯ : ಅಫಜಲಪುರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕದಲ್ಲಿ ವೈದ್ಯಾಧಿಕಾರಿಗಳ ಕೊರತೆ ಬಗ್ಗೆ

ಶ್ರೀ ಎಂ.ವೈ. ಪಾಟೀಲ್ (ಅಫಜಲಪುರ) :– ಮಾನ್ಯ ಅಧ್ಯಕ್ಷರೆ, ನಮ್ಮ ಅಫಜಲ್‌ಪುರ ತಾಲ್ಲೂಕಿನಲ್ಲಿ ಬಹಳಷ್ಟು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳೇ ಇಲ್ಲ. ಎಂ.ಬಿ.ಬಿ.ಎಸ್. ಮತ್ತು ಪಿ.ಜಿ. ಡಾಕ್ಟರ್‌ಗಳು ಇಲ್ಲ. ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿದ್ದಾರೆ. ಔಷಧಿಗಳ ಕೊರತೆ ಇಲ್ಲ. ಅದಕ್ಕಾಗಿ ಮಾನ್ಯ ಸಚಿವರಿಗೆ ಅಭಿನಂದಿಸುತ್ತಿದ್ದೇನೆ. ಆದರೆ ಡಾಕ್ಟರ್ ಇಲ್ಲದೇ ನಾವು ಮತ್ತೆ ಶಿಲಾಯುಗಕ್ಕೆ ಹೋಗಿದ್ದೇವೆ. ಮಂತ್ರ, ಯಂತ್ರ ಹಾಕಿಸಿಕೊಳ್ಳಲು ಹೋಗುತ್ತಿದ್ದೇವೆ. ಬರೆ ಹಾಕಿಸಿಕೊಳ್ಳಲು ಹೋಗುತ್ತಿದ್ದೇವೆ. ಈ ರೀತಿಯ ವ್ಯವಸ್ಥೆಯನ್ನು ಮತ್ತೆ ನಾವು ಪ್ರಾರಂಭ ಮಾಡಬೇಕಾಗಿದೆ. ಉಡಚರಿ ಎಂಬಲ್ಲಿ ಒಂದು ಆಸ್ಪತ್ರೆ ಇದೆ. ಅದು ಪ್ರಾರಂಭವಾಗಿ 25 ವರ್ಷಗಳಾಗಿದ್ದರೂ ಅಲ್ಲಿ ಡಾಕ್ಟರ್ ಇಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರ ಈ ರೀತಿ ನಡೆದರೆ ಜನರ ಆರೋಗ್ಯ ಕಾಪಾಡುವುದು ಹೇಗೆ ಎಂದು ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಅಫಜಲಪುರ ತಾಲ್ಲೂಕಿನಲ್ಲಿ 1,93,378 ಜನಸಂಖ್ಯೆ ಇದ್ದು 8 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎರಡು ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಅಫಜಲಪುರ ಆಸ್ಪತ್ರೆಯನ್ನು ನೂರು ಹಾಸಿಗೆಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 11 ವೈದ್ಯರ ಹುದ್ದೆಯನ್ನು ಮಂಜೂರು ಮಾಡಲಾಗಿದ್ದು ಇದರ ಜೊತೆ ಎನ್.ಆರ್.ಹೆಚ್.ಎಂ. ಅಡಿಯಲ್ಲಿ 8 ಹುದ್ದೆಗಳನ್ನು ನೇಮಕ ಮಾಡಲು ಅನುಮತಿ ದೊರಕಿದ್ದು ಒಟ್ಟು 19 ಆಗುತ್ತದೆ. ಇದರಲ್ಲಿ 13 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರಲ್ಲಿ 7 ವೈದ್ಯರು ಎಂ.ಬಿ.ಬಿ.ಎಸ್. ಪದವೀಧರರಾಗಿದ್ದು ಉಳಿದವರು ಆಯುಷ್ ವೈದ್ಯರುಗಳಾಗಿರುತ್ತಾರೆ. ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಎರಡು ಸಮುದಾಯ ಆರೋಗ್ಯ ಕೇಂದ್ರಗಳು : ಸ್ಟೇಷನ್ ಗಾಣಿಗಾಪುರ ಮತ್ತು ಟಿ. ಗಾಣಿಗಾಪುರ. ಒಟ್ಟು 8 ವೈದ್ಯರ ಹುದ್ದೆಗಳೂ ಮಂಜೂರಾಗಿದ್ದು ಇದರ ಜೊತೆಯಲ್ಲಿ ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಎರಡು ಹುದ್ದೆಗಳನ್ನು ನೇಮಕ ಮಾಡಲು ಅನುಮತಿ ದೊರಕಿದ್ದು ಒಟ್ಟು ಇದರಲ್ಲಿ ಮೂರು ವೈದ್ಯರು ಕಾರ್ಯನಿರ್ವಹಿಸುತ್ತಿದ್ದು ಇವರಲ್ಲಿ ಇಬ್ಬರು ಎಂ.ಬಿ.ಬಿ.ಎಸ್.